**3** ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.

ಓ ಎಸ್ ನಂ. **446/2017**

ದಿನಾಂಕಃ **09.03.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಬಿ ಎನ್ ಉಮೇಶ | ಸಿಡಬ್ಲೂ-1 |
| ತಂದೆಯ ಹೆಸರುಃ | ನಾಗಪ್ಪ | |
| ವಯಸ್ಸು ಃ | 50 ವರ್ಷ | |
| ಉದ್ಯೋಗ ಃ | ಸರ್ವೆಯರ್ | |
| ವಾಸ ಃ | ಕಡೂರು | |

ಮುಖ್ಯ ವಿಚಾರಣೆಃ

ಈ ನ್ಯಾಯಾಲಯವು ನನ್ನನ್ನು ನಿಯೋಗಿಯನ್ನಾಗಿ ನೇಮಿಸಿ ದಾವಾ ಸ್ವತ್ತಾದ ಸರ್ವೆ ನಂ 12ಃ2 ರ ಜಮೀನನ್ನು ಸಂಪೂರ್ಣವಾಗಿ ಅಳತೆ ಮಾಡಿ ಯಾರು ಯಾರು ಎಷ್ಟು ಅಳತೆಯ ಜಮೀನಿನಲ್ಲಿ ಸ್ವಾದೀನ ಹೊಂದಿದ್ದಾರೆ ಎಂದು ನಕಾಶೆ ತಯಾರಿಸಿ ವರದಿ ನೀಡುವಂತೆ ಆದೇಶಿಸಿ ವಾರೆಂಟ್ ಜಾರಿಗೊಳಿಸಿರುತ್ತದೆ. ನ್ಯಾಯಾಲಯದ ಆದೇಶದಂತೆ ವಾದಿ ಮತ್ತು ಪ್ರತಿವಾದಿಗಳಿಗೆ ದಿಃ 04.03.2025 ರಂದು ನೋಟಿಸನ್ನು ಜಾರಿ ಮಾಡಿ ವಿವಾದಿತ ಸ್ಥಳದಲ್ಲಿ ದಿಃ 12.03.2025 ರಂದು ಹಾಜರಿರುವಂತೆ ಸೂಚಿಸಿ ನೋಟಿಸನ್ನು ಹೊರಡಿಸಿರುತ್ತೇನೆ.

ದಿಃ 12.03.2025 ರಂದು ಸ್ಥಳಕ್ಕೆ ಬೆಳಗ್ಗೆ 11.00 ಗಂಟೆಗೆ ಹೋಗಿದ್ದು ಸ್ಥಳದಲ್ಲಿ ವಾದಿಗಳ ಪೈಕಿ ವಾದಿಯ ಮಗ ಚಂದ್ರಪ್ಪ ಹಾಗೂ ಪ್ರತಿವಾದಿಗಳ ಪೈಕಿ 1 ನೇ ಪ್ರತಿವಾದಿ ಹಾಜರಿರುತ್ತಾರೆ. ಸದರಿ ಆಸ್ತಿಯು ಕಸಬಾ ಹೋಬಳಿ ಕುರುಬರಹಳ್ಳಿಯ ಆಸ್ತಿಯಾಗಿರುತ್ತದೆ ಅದರೆ ವಾದ ಪತ್ರದಲ್ಲಿ ಯಗಟಿ ಹೋಬಳಿ ಎಂದು ಇರುತ್ತದೆ. ರೀ ಸರ್ವೆ ನಂ 12ಃ2 ರಲ್ಲಿ ಈ ದಾವೆ ಸಲ್ಲಿಸಿದ ನಂತರ ರೀ ಸರ್ವೆ ನಂ 12ಃ3, 12ಃ12, 12ಃ13, 12ಃ14 ಎಂದು ದುರಸ್ಥಿಯಾಗಿರುತ್ತದೆ. ಮೂಲ ಸರ್ವೆ ನಂ 12ಃ2 ರ ಒಟ್ಟು ವಿಸ್ತೀರ್ಣ 9 ಎಕರೆ 13 ಗುಂಟೆ ಯಾಗಿದ್ದು, ಅದರ ಪೈಕಿ 4 ಗುಂಟೆ ಎ ಖರಾಬು, 11 ಗುಂಟೆ ಬಿ ಖರಾಬು ಹೊರತುಪಡಿಸಿ ಉಳಿಕೆ ವಿಸ್ತೀರ್ಣ 8 ಎಕರೆ 38 ಗುಂಟೆ ಇರುತ್ತದೆ. ಇದರಂತೆ ಸರ್ವೆ ನಂ 12ಃ2 ರ ಮೂಲ ವಿಸ್ತೀರ್ಣದಂತೆ ವಾದಿ ಹಾಗೂ ಪ್ರತಿವಾದಿಗಳು ತಿಳಿಸಿದ ಅನುಭವ ಹಾಗೂ ತಿಳಿಸಿದ ಹೆಸರಿನಂತೆ ಅಳತೆ ಮಾಡಿ ಗಡಿ ಗುರುತು ಮಾಡಿ ಮಹಜರ್ ಮಾಡಿ ಸಹಿ ಪಡೆದಿರುತ್ತೇನೆ. ಅಳತೆ ಕಾರ್ಯ ಪೂರ್ಣಗೊಳಿಸಿ ನಕ್ಷೆ ಮತ್ತು ವರದಿಯನ್ನು ತಯಾರಿಸಿರುತ್ತೇನೆ.

ಸಾಕ್ಷಿ ನ್ಯಾಯಾಲಯದ ವಾರೆಂಟನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-1 ಎಂದು, ವಾದಿ ಮತ್ತು ಪ್ರತಿವಾದಿಗಳಿಗೆ ನೀಡಿದ ನೋಟಿಸನ್ನು ನಿಸಿ-2 ಎಂದು, 3 ಅಂಚೆ ರಶೀದಿಗಳನ್ನು ನಿಸಿ-3 ರಿಂದ 5 ಎಂದು, ಮಹಜರನ್ನು ನಿಸಿ-6 ಎಂದು, ವರದಿ ಮತ್ತು ನಕ್ಷೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಸಿ-7 ಮತ್ತು 8 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರು ಪಾಟೀ ಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ.

ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಸಿ ವಿ ಎಸ್ ವಕೀಲರಿಂದ ಃ

ಅಳತೆಗೆ ಹೋಗುವ ಪೂರ್ವದಲ್ಲಿ ಕಂದಾಯ ಇಲಾಖೆಯ ದಾವಾ ಸ್ವತ್ತಿನ ಆಕಾರ್ ಬಂದ್, ಮೂಲ ಅಟ್ಲಾಸ್, ದುರಸ್ಥಿಯಾದ ಅಟ್ಲಾಸ್, ಗ್ರಾಮ ನಕಾಶೆ ತೆಗೆದುಕೊಂಡು ಹೋಗಿರುತ್ತೇನೆ. ದಾವಾ ಸಲ್ಲಿಸಿದ ನಂತರ ದುರಸ್ತಿಯಾದ ಅಟ್ಲಾಸನ್ನು ತೆಗೆದುಕೊಂಡು ಹೋಗಿರುತ್ತೇನೆ. ಮೂಲ ಅಟ್ಲಾಸನ್ನು ಸ್ಥಳ ತನಿಖಾ ವರದಿಯಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಮೂಲ ಅಟ್ಲಾಸ್ ಪ್ರಕಾರ ಸರ್ವೆ ನಂ 12ಃ2 ರಲ್ಲಿ 1 ನೇ ಪ್ರತಿವಾದಿಗೆ 2 ಎಕರೆ 28 ಗುಂಟೆ ಜಮೀನು ಇತ್ತು ಎಂದರೆ ಸರಿ, ಸಾಕ್ಷಿ ಮುಂದುವರೆದು ಅನುಭವದಂತೆ 2 ಎಕರೆ ಇತ್ತು. ಸ್ಥಳದಲ್ಲಿ 2 ಎಕರೆ 28 ಗುಂಟೆ ಎಲ್ಲಿಂದ ಎಲ್ಲಿಗೆ ಬರುತ್ತದೆ ಎಂದು ಗುರುತು ಮಾಡಿರುತ್ತೇನೆ. 2 ಎಕರೆ 28 ಗುಂಟೆ ಗುರುತಿಸಿರುವ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸರ್ವೆ ನಂ 12ಃ2 ರಲ್ಲಿ 1 ನೇ ಪ್ರತಿವಾದಿಗೆ ಇದ್ದ 2 ಎಕರೆ 28 ಗುಂಟೆ ನಕ್ಷೆಯನ್ನು ತಯಾರಿಸಿ ಯಾಕೆ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ದುರಸ್ಥಿಯಂತೆ ಆದ ಹಿಸ್ಸೆಯ ಮೇರೆಗೆ ಸ್ವಾದೀನಾನುಭವದಂತೆ ನಕ್ಷೆ ತಯಾರಿಸಿ ಹಾಜರುಪಡಿಸಿರುತ್ತೇನೆ. ದುರಸ್ಥಿಯಂತೆ ಅಳತೆ ಮಾಡಲು ನ್ಯಾಯಾಲಯದ ಅದೇಶ ಇರಲಿಲ್ಲ. ಸರ್ವೆ ನಂ 12ಃ2 ರ ಪೂರ್ಣ ವಿಸ್ತೀರ್ಣವನ್ನು ಅಳತೆ ಮಾಡಲು ಇತ್ತು. ಪಹಣಿಯಂತೆ ಅಳತೆ ಮಾಡಲು ನ್ಯಾಯಾಲಯದ ಅದೇಶ ಇರಲಿಲ್ಲ.

ನಿಸಿ-1 ರ ವಾರೆಂಟಿನಲ್ಲಿ ದಾವಾ ಸ್ವತ್ತಾದ ಸರ್ವೆ ನಂ 12ಃ2 ರ ಜಮೀನನ್ನು ಸಂಪೂರ್ಣವಾಗಿ ಅಳತೆ ಮಾಡಿ ಯಾರು ಯಾರು ಎಷ್ಟು ಅಳತೆಯ ಜಮೀನಿನಲ್ಲಿ ಸ್ವಾದೀನ ಹೊಂದಿದ್ದಾರೆ ಎಂದು ನಕಾಶೆ ತಯಾರಿಸಿ ವರದಿ ನೀಡುವಂತೆ ಆದೇಶ ಇತ್ತು. 1 ನೇ ಪ್ರತಿವಾದಿಗೆ ಸೇರಿದ ಇನ್ನೂ ಉಳಿದ 20 ಗುಂಟೆ ಸ್ವಾದೀನ ಯಾರ ಬಳಿ ಇರುತ್ತದೆ ಎಂದರೆ ಸಾಕ್ಷಿ ಹಿಂದಿನ ಹಕ್ಕು ದಾಖಲೆಗಳನ್ನು ನೋಡಿ ನಿರ್ಧಾರ ಮಾಡಬೇಕು ಎಂದು ನುಡಿಯುತ್ತಾರೆ. ನಾನು ಸ್ಥಳಕ್ಕೆ ಹೋಗಿ ನಕಾಶೆ ತಯಾರಿಸಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಸೆರೀದ 2 ಎಕರೆ 28 ಗುಂಟೆ ಆಸ್ತಿಯನ್ನು ಅಳತೆ ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಸ್ವಾದೀನಾನುಭದಂತೆ ಅಳತೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸ್ವಾದೀನಾನುಭದಂತೆ ಅಳತೆ ಮಾಡಲು ನ್ಯಾಯಾಲಯದ ಆದೇಶ ಇತ್ತಾ ಎಂದರೆ ಸಾಕ್ಷಿ ಯಾರು ಯಾರು ಎಷ್ಟು ವಿಸ್ತೀರ್ಣದಲ್ಲಿ ಸ್ವಾದೀನ ಹೊಂದಿದ್ದಾರೆ ಎಂದು ಅಳತೆ ಮಾಡಲು ಆದೇಶ ಇತ್ತು. ಮೂಲ ನಕ್ಷೆಯಂತೆ ಅಳತೆ ಮಾಡಿದ್ದಲ್ಲಿ 1 ನೇ ಪ್ರತಿವಾದಿಗೆ ಸೆರೀದ 20 ಗುಂಟೆ ಯಾರು ಸ್ವಾದೀನ ಹೊಂದಿರುತ್ತಾರೆ ಎಂದು ತಿಳಿಯಬಹುದು ಎಂದರೆ ಸಾಕ್ಷಿ ಹಕ್ಕು ದಾಖಲೆಯನ್ನು ನೋಡಿದರೆ ತಿಳಿಯಬಹುದು ಎಂದು ನುಡಿಯುತ್ತಾರೆ. ಮೂಲ ದಾಖಲೆಯಂತೆ 1 ನೇ ಪ್ರತಿವಾದಿ ಹೆಸರಿಗೆ 2 ಎಕರೆ 28 ಗುಂಟೆ ಆಸ್ತಿ ಇತ್ತು ಎಂದರೆ ಸಾಕ್ಷಿ ಪಹಣಿಯಲ್ಲಿದೆ ಎಂದು ನುಡಿಯುತ್ತಾರೆ. ನಾನು ತೆಗೆದುಕೊಂಡು ಹೋದ ಮೂಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಮುಂದಿನ ದಿನಾಂಕದಲ್ಲಿ ಹಾಜರುಪಡಿಸುತ್ತೇನೆ.

<u>( ಮುದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು )</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.